# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1257 |
| 2 | ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 23-12-2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರಿನ ವ್ಯಾಪ್ತಿಯ ರಸ್ತೆಯಲ್ಲಿ ಹಾಗೂ ಫುಟ್‌ಪಾತ್‌ಗಳಲ್ಲಿ ಯಾವ ಯಾವ ಇಲಾಖೆಗಳು ಯಾವ ಯಾವ ರೀತಿಯ ಕಾಮಗಾರಿ ಹಾಗೂ ಇತರೆ ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತಿವೆ; (ವಿವರ ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಹಾಗೂ ಫುಟ್‌ಪಾತ್‌ಗಳಲ್ಲಿ ಸರ್ಕಾರದ ವಿವಿಧ ಇಲಾಖೆ / ನಿಗಮ / ಸಂಸ್ಥೆಗಳು ಕೈಗೊಳ್ಳುತ್ತಿರುವ / ನಿರ್ವಹಿಸುತ್ತಿರುವ ಕಾಮಗಾರಿ ಹಾಗೂ ಇತರೆ ಕಾರ್ಯಗಳ ವಿವರಗಳು ಈ ಕೆಳಕಂಡಂತಿರುತ್ತವೆ.<br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ Non-Motorised Transit (NMT) ಯೋಜನೆಯಡಿ, ಟೆಂಡರ್ ಶ್ಯೂರ್ ಯೋಜನೆಯಡಿ, ವೈಟ್‌ಟಾಪಿಂಗ್ ಯೋಜನೆಯಡಿ ಮತ್ತು ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅಡಿಯಲ್ಲಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿರುತ್ತದೆ.<br>• ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಪಾಲಿಕೆ ವ್ಯಾಪ್ತಿಯ ಆಯ್ದ ರಸ್ತೆಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿರುತ್ತದೆ.<br>• ಕೆ.ಆರ್.ಡಿ.ಸಿ.ಎಲ್ ವತಿಯಿಂದ ಪಾಲಿಕೆ ವ್ಯಾಪ್ತಿಯ 12 ಅತಿ ಹೆಚ್ಚಿನ ವಾಹನ ಸಾಂದ್ರತೆಯ ರಸ್ತೆಗಳನ್ನು (High Density Corridor-HDC) ಅಭಿವೃದ್ಧಿಪಡಿಸಿ 5 ವರ್ಷಗಳ ಅವಧಿಗೆ ನಿರ್ವಹಣೆ ಕೈಗೊಳ್ಳುವ ಯೋಜನೆಯನ್ನು ರೂಪಿಸಿ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಪ್ರಾಯೋಗಿಕವಾಗಿ ಹಳೆ ವಿಮಾನ ನಿಲ್ದಾಣ ರಸ್ತೆ ಮತ್ತು ಮಾಗಡಿ ಮುಖ್ಯ ರಸ್ತೆಯ ಆಯ್ದ ಸರಪಳಿಗಳಲ್ಲಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿರುತ್ತದೆ.<br>• ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಸಂಸ್ಥೆಯು ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಸುಮಾರು 6000 ಕಿ.ಮೀ. ಉದ್ದದ ಓವರ್ ಹೆಡ್ ವಿದ್ಯುತ್ ತಂತಿ ಮಾರ್ಗವನ್ನು ಭೂಗತ ಕೇಬಲ್ ಮಾದರಿಗೆ ಮಾರ್ಪಡಿಸುವ ಯೋಜನೆಯನ್ನು ರೂಪಿಸಿದ್ದು, ಭೂಗತ ಕೇಬಲ್ ಅಳವಡಿಸುವ ಕಾಮಗಾರಿ ನಿರ್ವಹಿಸುತ್ತಿದೆ. |

| | | |
|---|---|---|
| | | • ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಬದಲಿಸುವ/ ಹೊಸದಾಗಿ ಅಳವಡಿಸುವ ಕಾಮಗಾರಿಗಳನ್ನು ಸತತವಾಗಿ ನಿರ್ವಹಿಸುತ್ತಿದ್ದು, ಪ್ರಸ್ತುತ ಪ್ರಮುಖವಾಗಿ ಪಾಲಿಕೆಗೆ ಸೇರ್ಪಡೆಗೊಂಡಿರುವ ಎಲ್ಲಾ 110 ಹಳ್ಳಿಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸುತ್ತಿದೆ.<br>• ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯು ಪಾಲಿಕೆ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಭೂಗತ ವಿದ್ಯುತ್ ಕೇಬಲ್ ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸುತ್ತಿದೆ.<br>• ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿ.ಎಂ.ಆರ್.ಸಿ.ಎಲ್) ಸಂಸ್ಥೆಯು ನಮ್ಮ ಮೆಟ್ರೋ ಯೋಜನೆಯಡಿ ಪಾಲಿಕೆ ವ್ಯಾಪ್ತಿಯಲ್ಲಿನ ಕೆಲವೊಂದು ರಸ್ತೆಗಳಲ್ಲಿ ಮೆಟ್ರೋ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ.<br>• ಸರ್ಕಾರದ ಅಂಗಸಂಸ್ಥೆಗಳು ಮತ್ತು ಖಾಸಗಿ ಓ.ಎಫ್.ಸಿ ಕೇಬಲ್ ಅಳವಡಿಕೆ ಸಂಸ್ಥೆಗಳು ಸಹ ಓ.ಎಫ್.ಸಿ ಮತ್ತು ಇತರೆ ಮಾದರಿಯ ಕೇಬಲ್/ಅನುಸಾಧನಗಳನ್ನು ಸಹ ಭೂಗತವಾಗಿ ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸುತ್ತಿವೆ.<br>• ಸಣ್ಣ ನೀರಾವರಿ ಇಲಾಖೆಯು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳಿಗೆ ಶುದ್ಧೀಕರಿಸಿದ ನೀರು ಸರಬರಾಜು ಮಾಡುವ ಯೋಜನೆಯಡಿ, ಪಾಲಿಕೆ ವ್ಯಾಪ್ತಿಯಲ್ಲಿನ ಕೆಲವೊಂದು ರಸ್ತೆಗಳಲ್ಲಿ ಬೃಹತ್ ಕೊಳವೆ ಅಳವಡಿಸುವ ಕಾಮಗಾರಿಗಳನ್ನು ನಿರ್ವಹಿಸುತ್ತಿದೆ.<br>• ಗೇಲ್‌ಗ್ಯಾಸ್ ಮತ್ತು ಗೇಲ್ ಇಂಡಿಯಾ ಸಂಸ್ಥೆಗಳು ನೈಸರ್ಗಿಕ ಅನಿಲ ಸರಬರಾಜು ಮಾಡುವ ಕೊಳವೆ ಅಳವಡಿಸಲು ಪಾಲಿಕೆ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಕಾಮಗಾರಿಗಳನ್ನು ನಿರ್ವಹಿಸುತ್ತಿವೆ.<br>ಬೆಂಗಳೂರು ವ್ಯಾಪ್ತಿಯಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಪ್ರದೇಶಾಭಿವೃದ್ಧಿ ಯೋಜನೆಯಡಿ, ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (CBD Area) 32 ರಸ್ತೆಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. |
| ಆ | ಸದರಿ ಕಾಮಗಾರಿಗಳು ಒಂದು ಸ್ಥಳದಲ್ಲಿ ಗರಿಷ್ಠ ಎಷ್ಟು ದಿನಗಳವರೆಗೆ ನಡೆಯುತ್ತದೆ; ಅಥವಾ ನಿರ್ದಿಷ್ಠ ಕಾಮಗಾರಿ ಅವಧಿಯನ್ನು ಸಂಬಂಧಿಸಿದ ಇಲಾಖೆ ನಿಗಧಿಪಡಿಸುತ್ತಿದೆಯೇ; ಹಾಗಿದ್ದಲ್ಲಿ, ವಿವರ ಒದಗಿಸುವುದು ಇಲ್ಲದಿದ್ದಲ್ಲಿ ಕಾರಣಗಳೇನು. | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ರಸ್ತೆ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ / ಉನ್ನತೀಕರಣ ಕಾಮಗಾರಿ / ಯೋಜನೆಗಳನ್ನು ಒಂದು ಸ್ಥಳದಲ್ಲಿ ಕಾಮಗಾರಿಯ ಸ್ವರೂಪ ಮತ್ತು ಪರಿಮಾಣ / ಗಾತ್ರದ ಅನುಸಾರ ಸುಮಾರು 60 ದಿನಗಳಿಂದ 150 ದಿನಗಳವರೆಗೆ ಮತ್ತು ಬೃಹತ್ ಯೋಜನೆಗಳಾದ ಮೇಲ್ಸೇತುವೆ / ಕೆಳಸೇತುವೆ ಮಾದರಿ ಯೋಜನೆಗಳನ್ನು 12 ತಿಂಗಳುಗಳಿಂದ 24 |

| | | |
|---|---|---|
| | | ಅಡಚಣೆಗಳು.<br>ಇದಲ್ಲದೇ, ಸರ್ಕಾರದ ಇತರೆ ಇಲಾಖೆಗಳು /ಅಂಗ ಸಂಸ್ಥೆಗಳು ಮತ್ತು ಖಾಸಗಿ ಓ.ಎಫ್.ಸಿ ಕೇಬಲ್ ಅಳವಡಿಕೆ ಸಂಸ್ಥೆಗಳು ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಅನುಸಾಧನ ಅಳವಡಿಸುವ ಪ್ರಕರಣಗಳಲ್ಲಿಯೂ ಕಾಮಗಾರಿ ಕೈಗೊಳ್ಳುವ ಬಗ್ಗೆ ಗರಿಷ್ಠ ಅವಧಿಯನ್ನು ಸಹ ನಿಗಧಿಪಡಿಸುತ್ತಿದ್ದು, ಕೆಲವೊಂದು ಇಲಾಖೆ / ಸಂಸ್ಥೆಗಳು ವಿವಿಧ ಕಾರಣಗಳಿಂದ ವಿಳಂಬವಾಗಿ ಕಾಮಗಾರಿ ಕೈಗೊಳ್ಳುತ್ತಿರುತ್ತಾರೆ.<br>ಬೆಂಗಳೂರು ವ್ಯಾಪ್ತಿಯಲ್ಲಿ, ಬೆಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ಕಾರ್ಯಾದೇಶ ಪತ್ರದಲ್ಲಿ ಕಾಮಗಾರಿಗಳ ಕಾಲಾವಧಿಯನ್ನು ನಿಗಧಿಪಡಿಸಿ, ಗುತ್ತಿಗೆದಾರರಿಗೆ ಕಾಮಗಾರಿ ನಿರ್ವಹಿಸಲು ಆದೇಶ ನೀಡಲಾಗಿರುತ್ತದೆ. |
| ಇ | ಕನಿಷ್ಠ ಒಂದು ನೂರು ಮೀಟರ್ ಉದ್ದ ಯಾವುದೇ ಕಾಮಗಾರಿ ಕೈಗೊಂಡಲ್ಲಿ ಈ ಕುರಿತು ನಿರ್ದಿಷ್ಟ ನಿಯಮ ಇಲ್ಲದ ಕಾರಣ ವರ್ಷಗಳ ಕಾಲ ಕಾಮಗಾರಿ ನಡೆಯುತ್ತಿದ್ದು, ಸದರಿ ಅವಧಿಯಲ್ಲಿ ಧೂಳು, ವಾಹನ ಸಂಚಾರ ಇಕ್ಕಟ್ಟು ಹಾಗೂ ಆಜುಬಾಜು ಕಟ್ಟಡಗಳ ಬಾಡಿಗೆ ನಷ್ಟ ಈ ರೀತಿಯ ಹಲವಾರು ಸಮಸ್ಯೆಗಳಿಗೆ ಸರ್ಕಾರದ ಸಮಜಾಯಿಷಿ ಯೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ರಸ್ತೆ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ / ಉನ್ನತೀಕರಣ ಹಾಗೂ ಇತರೆ ಕಾಮಗಾರಿ / ಯೋಜನೆಗಳನ್ನು ನಿಗಧಿತ ಅವಧಿಯಲ್ಲಿಯೇ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ. ಆದರೆ, ಕೆಲವೊಂದು ಕಾಮಗಾರಿ / ಯೋಜನೆಯ ಪ್ರಕರಣಗಳಲ್ಲಿ ಈ ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ ವಿಳಂಬವಾಗುತ್ತಿರುತ್ತದೆ.<br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬಹುತೇಕ ಹೆಚ್ಚಿನ ರಸ್ತೆಗಳು ಕೇವಲ ರಸ್ತೆಯ ಜಾಗವಾಗಿ ವಾಹನ ಸಂಚಾರಕ್ಕೆ ಮಾತ್ರವೇ ಉಪಯೋಗಿಸದೆ, ಹಲವಾರು ಸಂಸ್ಥೆಗಳು ವಿವಿಧ ರೀತಿಯ ಅನುಸಾಧನಗಳನ್ನು ಅಳವಡಿಸಿ ಸಾರ್ವಜನಿಕರ ಉಪಯೋಗಕ್ಕೆ ಸಂಪರ್ಕ ನೀಡಲು ಸಹ ಬಳಸಿಕೊಂಡಿರುವುದರಿಂದ.<br>• ನಗರದ ಹಲವಾರು ಪ್ರಮುಖ ರಸ್ತೆಗಳನ್ನು ಕಾಲ ಕಾಲಕ್ಕೆ / ಅವಶ್ಯಕತೆಗೆ ಅನುಗುಣವಾಗಿ ಅಗಲೀಕರಣ ಮಾಡಿರುವುದರಿಂದ, ಈ ಹಿಂದೆ ವಿವಿಧ ಇಲಾಖೆಗಳು ಅಳವಡಿಸಿದ್ದ ವಿವಿಧ ಮಾದರಿಯ ಅನುಸಾಧನಗಳನ್ನು ನಿಖರವಾಗಿ ಗುರುತಿಸಲು ಕಷ್ಟಸಾಧ್ಯವಾಗುತ್ತಿರುವುದರಿಂದ.<br>• ಪಾಲಿಕೆ ವ್ಯಾಪ್ತಿಯಲ್ಲಿನ ಹಾಲಿ ಇರುವ ಪ್ರಮುಖ ಮತ್ತು ಸಂಪರ್ಕ ರಸ್ತೆಗಳಲ್ಲಿ, ಸದರಿ ರಸ್ತೆಗಳ ಅಗಲಕ್ಕೆ ಅನುಗುಣವಾಗಿ ಸಂಚರಿಸಬೇಕಾಗಿರುವ ವಾಹನಗಳ ಸಾಮರ್ಥ್ಯಕಿಂತ 4 ಪಟ್ಟು ಹೆಚ್ಚಿನ ಸಾಂದ್ರತೆಯ ವಾಹನಗಳು ಸಂಚರಿಸುತ್ತಿರುವುದರಿಂದ ಯೋಜನೆಯಲ್ಲಿ ಅಳವಡಿಸಿ ಕೊಂಡಿರುವ ಎಲ್ಲಾ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅವಕಾಶವಿಲ್ಲದೆ ಇರುವುದರಿಂದ ಹಂತ ಹಂತವಾಗಿ ಮತ್ತು ಕೆಲವೊಂದು ಬಾರಿ ಒಂದು ಬದಿಯ ಭಾಗಶಃ ಪ್ರದೇಶಗಳಲ್ಲಿ ಕಾಮಗಾರಿ ಕೈಗೊಳ್ಳಬೇಕಾಗಿರುವುದರಿಂದ. |

ತಿಂಗಳುಗಳ ಅವಧಿಯಲ್ಲಿ ಕೈಗೊಳ್ಳಲಾಗುತ್ತಿದೆ. ಎಲ್ಲಾ ಮಾದರಿಯ ಕಾಮಗಾರಿ / ಯೋಜನೆಗಳಿಗೆ ಪಾಲಿಕೆ ವತಿಯಿಂದ ನಿರ್ದಿಷ್ಟ ಅವಧಿಯನ್ನು ನಿಗಧಿಪಡಿಸಲಾಗುತ್ತಿರುತ್ತದೆ. ಆದರೆ, ಕೆಲವೊಂದು ಕಾಮಗಾರಿ / ಯೋಜನೆಯ ಪ್ರಕರಣಗಳಲ್ಲಿ ಈ ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ ವಿಳಂಬವಾಗುತ್ತಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬಹುತೇಕ ಹೆಚ್ಚಿನ ರಸ್ತೆಗಳನ್ನು ಕೇವಲ ರಸ್ತೆಯ ಜಾಗವಾಗಿ ವಾಹನ ಸಂಚಾರಕ್ಕೆ ಮಾತ್ರವೇ ಉಪಯೋಗಿಸದೆ, ಹಲವಾರು ಸಂಸ್ಥೆಗಳು ವಿವಿಧ ರೀತಿಯ ಅನುಸಾಧನಗಳನ್ನು ಅಳವಡಿಸಿ, ಸಾರ್ವಜನಿಕರ ಉಪಯೋಗಕ್ಕೆ ಸಂಪರ್ಕ ಕಲ್ಪಿಸಲು ಸಹ ಬಳಸಲಾಗುತ್ತಿದೆ.
- ನಗರದ ಹಲವಾರು ಪ್ರಮುಖ ರಸ್ತೆಗಳನ್ನು ಕಾಲಕಾಲಕ್ಕೆ / ಅವಶ್ಯಕತೆಗೆ ಅನುಗುಣವಾಗಿ ಅಗಲೀಕರಣ ಮಾಡಿರುವುದರಿಂದ, ಈ ಹಿಂದೆ ವಿವಿಧ ಇಲಾಖೆಗಳು ಅಳವಡಿಸಿದ್ದ ವಿವಿಧ ಮಾದರಿಯ ಅನುಸಾಧನಗಳನ್ನು ನಿಖರವಾಗಿ ಗುರುತಿಸಲು ಕಷ್ಟಸಾಧ್ಯವಾಗುತ್ತಿದೆ.
- ಪಾಲಿಕೆ ವ್ಯಾಪ್ತಿಯಲ್ಲಿನ ಹಾಲಿ ಇರುವ ಪ್ರಮುಖ ಮತ್ತು ಸಂಪರ್ಕ ರಸ್ತೆಗಳಲ್ಲಿ, ಸದರಿ ರಸ್ತೆಗಳ ಅಗಲಕ್ಕೆ ಅನುಗುಣವಾಗಿ ಸಂಚರಿಸಬೇಕಾಗಿರುವ ವಾಹನಗಳ ಸಾಮರ್ಥ್ಯಕ್ಕಿಂತ 4 ಪಟ್ಟು ಹೆಚ್ಚಿನ ಸಾಂದ್ರತೆಯ ವಾಹನಗಳು ಸಂಚರಿಸುತ್ತಿರುವುದರಿಂದ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಎಲ್ಲಾ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಆದುದ್ದರಿಂದ ಹಂತ ಹಂತವಾಗಿ ಮತ್ತು ಕೆಲವೊಂದು ಬಾರಿ ಒಂದು ಬದಿಯ ಭಾಗಶಃ ಪ್ರದೇಶಗಳಲ್ಲಿ ಕಾಮಗಾರಿ ಕೈಗೊಳ್ಳಬೇಕಾಗಿರುವುದರಿಂದ.
- ಬೆಸ್ಕಾಂ / ಕೆ.ಪಿ.ಟಿ.ಸಿ.ಎಲ್ ಸಂಸ್ಥೆಗಳಿಗೆ ಸಂಬಂಧಪಟ್ಟ ವಿದ್ಯುತ್ ಕೇಬಲ್ / ಕಂಬ / ಟ್ರಾನ್ಸ್‌ಫಾರ್ಮರ್ / ಆರ್.ಎಂ.ಯು ಇತ್ಯಾದಿಗಳ ಸ್ಥಳಾಂತರ ಮತ್ತು ಹೊಸದಾಗಿ ಅಳವಡಿಸುವುದರಿಂದ.
- ಬೆಂಗಳೂರು ಜಲ ಮಂಡಳಿಗೆ ಸಂಬಂಧಪಟ್ಟ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳ ಸ್ಥಳಾಂತರ ಮತ್ತು ಹೊಸದಾಗಿ ಅಳವಡಿಸುವುದರಿಂದ.
- ಓ.ಎಫ್.ಸಿ ಸಂಬಂಧಿತ ಹಾಗೂ ಇತರೆ ಕೇಬಲ್ / ಕೊಳವೆಗಳ ಸ್ಥಳಾಂತರ ಅಥವಾ ಸ್ಥಳಾಂತರ ಮತ್ತು ಹೊಸದಾಗಿ ಅಳವಡಿಸುವುದರಿಂದ.
- ಯೋಜನೆ ಸ್ಥಳಗಳಲ್ಲಿ ಅಡ್ಡಲಾಗಿರುವ ಮರ ತೆರವುಗೊಳಿಸುವ ಬಗ್ಗೆ ಉಂಟಾಗುವ ವಿಳಂಬ / ವಿರೋಧ / ಅಡಚಣೆಗಳಿಂದಾಗಿ
- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾಗುವ ವಿಳಂಬ /

| | | |
|---|---|---|
| | | • ಬೆಸ್ಕಾಂ / ಕೆ.ಪಿ.ಟಿ.ಸಿ.ಎಲ್ ಸಂಸ್ಥೆಗಳಿಗೆ ಸಂಬಂಧಪಟ್ಟ ವಿದ್ಯುತ್ ಕೇಬಲ್ / ಕಂಬ / ಟ್ರಾನ್ಸ್‌ಫಾಮರ್ / ಆರ್.ಎಂ.ಯು ಇತ್ಯಾದಿಗಳ ಸ್ಥಳಾಂತರ ಮತ್ತು ಹೊಸದಾಗಿ ಅಳವಡಿಸುವುದರಿಂದ.<br>• ಬೆಂಗಳೂರು ಜಲ ಮಂಡಳಿಗೆ ಸಂಬಂಧಪಟ್ಟ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳ ಸ್ಥಳಾಂತರ ಮತ್ತು ಹೊಸದಾಗಿ ಅಳವಡಿಸುವುದರಿಂದ.<br>• ಓ.ಎಫ್.ಸಿ ಸಂಬಂಧಿತ ಹಾಗೂ ಇತರೆ ಕೇಬಲ್ / ಕೊಳವೆಗಳ ಸ್ಥಳಾಂತರ ಮತ್ತು ಹೊಸದಾಗಿ ಅಳವಡಿಸುವುದರಿಂದ.<br>• ಯೋಜನೆ ಸ್ಥಳಗಳಲ್ಲಿ ಅಡ್ಡಲಾಗಿರುವ ಮರಗಳ ತೆರವುಗೊಳಿಸುವ ಬಗ್ಗೆ ಉಂಟಾಗುವ ವಿಳಂಬ / ವಿರೋಧ / ಅಡಚಣೆಗಳಿಂದಾಗಿ.<br>• ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾಗುವ ವಿಳಂಬ / ಅಡಚಣೆಗಳು.<br><br>ವಿಳಂಬವಾಗುವ ಕಾಮಗಾರಿ / ಯೋಜನೆಗಳ ಪ್ರದೇಶದಲ್ಲಿ ಸಂಚಾರ ದಟ್ಟಣೆ ನಿವಾರಿಸಲು ಪರ್ಯಾಯ ಮಾರ್ಗ ಬಳಸುವ ಬಗ್ಗೆ ಸಾರ್ವಜನಿಕರಿಗೆ ತಿಳಿಯುವಂತೆ ಫಲಕಗಳನ್ನು ಅಳವಡಿಸುವುದು, ದಿನಪತ್ರಿಕೆಯಲ್ಲಿ ಪ್ರಚುರ ಪಡಿಸುವುದು ಇತ್ಯಾದಿ ಕ್ರಮಗಳನ್ನು ಪಾಲಿಕೆ ವತಿಯಿಂದ ಕೈಗೊಳ್ಳಲಾಗುತ್ತಿರುತ್ತದೆ.<br><br>ಮುಂದುವರೆದು, ಕಾಮಗಾರಿಗಳ ಚಾಲ್ತಿಯ ಸಮಯದಲ್ಲಿ ವಾಹನ ಸವಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ನಿರ್ದಿಷ್ಟ ಕಾಮಗಾರಿಯ ಸ್ಥಳಗಳಲ್ಲಿ Barricade ಅಳವಡಿಸಲು ಹಾಗೂ ಧೂಳಿನಿಂದಾಗಿ ಉಂಟಾಗುವ ತೊಂದರೆಯನ್ನು ತಪ್ಪಿಸಲು ಆಗಾಗ ರಸ್ತೆಗಳಿಗೆ ನೀರನ್ನು Spray ಮಾಡಲಾಗುತ್ತಿದ್ದು, Green Net ಅನ್ನು ಅಳವಡಿಸಿ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br><br>ಬೆಂಗಳೂರು ನಗರ ವ್ಯಾಪ್ತಿಯಲ್ಲಿ, ಬೆಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ನಿರ್ವಹಿಸುತ್ತಿರುವ ಕಾಮಗಾರಿಗಳು ಕನಿಷ್ಠ 100 ಮೀಟರ್ ಗಿಂತ ಹೆಚ್ಚಾಗಿರುತ್ತವೆ. ಸದರಿ ಕಾಮಗಾರಿಗಳನ್ನು ಇತರೆ ಇಲಾಖೆಗಳಾದ ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬಿ.ಎಸ್.ಎನ್.ಎಲ್., ಟ್ರಾಫಿಕ್ ಪೊಲೀಸ್ ಇಲಾಖಾ ರವರ ಸಮನ್ವಯದೊಂದಿಗೆ ನಿರ್ವಹಿಸಬೇಕಾಗಿರುತ್ತದೆ. ಸದರಿ ಕಾಮಗಾರಿಗಳ ಅನುಷ್ಠಾನ ಸಮಯದಲ್ಲಿ ಎಲ್ಲ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ. |

| | | |
|---|---|---|
| ಈ | ಸಮಸ್ಯೆ ಕುರಿತು ಸರ್ಕಾರ ಈ ಹಿಂದೆ ಕಾಮಗಾರಿ ಗುಣನಿಯಂತ್ರಣ ಮಂಡಳಿ ನೀಡಿರುವ ಮಧ್ಯಂತರ ವರದಿಯ ಭಾಗ ಜಾರಿಗೆ ತರುವುದರೊಂದಿಗೆ ಸದರಿ ಸದಸ್ಯ ಕಾರ್ಯದರ್ಶಿಯವರೊಂದಿಗೆ ಚರ್ಚಿಸಿ ಪರಿಹಾರ ರೂಪಿಸುವ ಕ್ರಮ ಕೈಗೊಳ್ಳುವುದೇ? (ಹಾಗಿದ್ದಲ್ಲಿ ಈ ಕ್ರಮದ ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಲೋಇ 64 ಇಎಪಿ 2008, ದಿನಾಂಕ: 03-11-2008 ರಲ್ಲಿ ಡಾ॥ ಸಿ.ಎಸ್. ವಿಶ್ವನಾಥ್ ಇವರ ಅಧ್ಯಕ್ಷತೆಯಲ್ಲಿ ಕಾಮಗಾರಿಗಳ ಗುಣ ನಿಯಂತ್ರಣ ಕಾರ್ಯಪಡೆ ಯನ್ನು ಲೋಕೋಪಯೋಗಿ ಇಲಾಖೆಯಿಂದ ಸೃಜಿಸಿರುವುದಾಗಿ ತಿಳಿದುಬಂದಿರುತ್ತದೆ. ಸದರಿ ಕಾರ್ಯಪಡೆಯು ದಿನಾಂಕ: 12-09-2012 ರಂದು ಮಧ್ಯಂತರ ಶಿಫಾರಸ್ಸು / ವರದಿಯನ್ನು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿರುವುದಾಗಿ ತಿಳಿದುಬಂದಿರುತ್ತದೆ. |

**ಸಂಖ್ಯೆ: ನಅಇ 376 ಎಂಎಸ್‌ವೈ 2021**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ